... ವಿಶ್ವವಿದ್ಯಾಲಯ
... ಮಹಾವಿದ್ಯಾಲಯ ಆವರಣ
... ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

**ವಿಷಯ 06:** ಒಡನಾಡಿ ಸಂಸ್ಥೆಯಂತಹ ಸೇವಾಸಂಸ್ಥೆಗಳ ಅಭ್ಯರ್ಥಿಗಳಿಗೆ ಕಸಂವಿಯಲ್ಲಿ ಅಧ್ಯಯನ ಮಾಡಲು ವಿಶೇಷ ಮೀಸಲಾತಿ ನೀಡುವ ಬಗೆಗೆ

**ಟಿಪ್ಪಣಿ:** ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಒಡನಾಡಿ ಸಂಸ್ಥೆಯ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳ ಕುರಿತು ರಾಜ್ಯಮಟ್ಟದ ಕಾರ್ಯಾಗಾರವನ್ನು ದಿನಾಂಕ 31.05.2014ರಂದು ಮೈಸೂರಿನಲ್ಲಿ ಏರ್ಪಡಿಸಿತ್ತು. ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳನ್ನು ಕುರಿತು ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸವನ್ನು ಮಾಡಲು ತಮ್ಮ ಸಂಸ್ಥೆಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಮೀಸಲಾತಿ ನೀಡಬೇಕೆಂದು ಕೋರಿ ಅದಕ್ಕೆ ಸಂಬಂಧಿಸಿದ ಪತ್ರಿಕಾವರದಿಗಳನ್ನು ನೀಡಿರುವರು. ಈ ಸಂಬಂಧ ಸಭೆಯ ಅನುಮತಿಯನ್ನು ಕೋರಿದೆ.

**ನಿರ್ಣಯ:** **ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳು/ವಿದ್ಯಾರ್ಥಿಗಳು ಕಸಂವಿಗೆ ಸಂಬಂಧಿಸಿದ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ಅರ್ಜಿ ಸಲ್ಲಿಸಿ ಆಯ್ಕೆಯಾಗುವ ಸಂದರ್ಭದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬಹುದೆಂದು ಸಭೆಯು ತೀರ್ಮಾನಿಸಿತು.**

Sridhar M.K.
**ಕುಲಸಚಿವರು**

[illegible] ವಿಶ್ವವಿದ್ಯಾಲಯ

[illegible] 560018

# कर्नाटक-संस्कृत-विश्वविद्यालयः

श्री चामराजेन्द्र संस्कृत महाविद्यालयस्य परिसरः

पम्पमहाकविमार्गः, चामराजपेटे, बेङ्गलूरु - ५६००१८.

ಸಂಖ್ಯೆ: ಕಸಂವಿ/ಆಡಳಿತ/ಕು.ಸ.ಕಾ./ಸಾ.ಪ/2015-16/819-1 ದಿನಾಂಕ: 04.07.2015

ಇವರಿಗೆ,

ಶ್ರೀ ಸ್ಟ್ಯಾನ್ಲಿ ಕೆ.ವಿ.
ಸಂಸ್ಥಾಪಕ ಕಾರ್ಯದರ್ಶಿಗಳು
ಒಡನಾಡಿ ಸೇವಾ ಸಂಸ್ಥೆ (ರಿ.)
# 15/2ಬಿ, ಎಸ್.ಆರ್.ಎಸ್. ಕಾಲೋನಿ
ಹೂಟಗಳ್ಳಿ ಗ್ರಾಮ, ಬೆಳವಾಡಿ ಅಂಚೆ
ಹುಣಸೂರು-ಮೈಸೂರು ರಸ್ತೆ, ಮೈಸೂರು - 570018.

ಮಾನ್ಯರೇ,

ವಿಷಯ: ಒಡನಾಡಿ ಸಂಸ್ಥೆಯ ಆಶ್ರಿತ ಮಕ್ಕಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಗೆ ವಿಶೇಷ ಮೀಸಲಾತಿ ಕಲ್ಪಿಸುವ ಬಗೆಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: 204/2015-16; ದಿನಾಂಕ: 20.06.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಒಡನಾಡಿ ಸಂಸ್ಥೆಯ ಆಶ್ರಿತ ಮಕ್ಕಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಗೆ ವಿಶೇಷ ಮೀಸಲಾತಿ ಕಲ್ಪಿಸಿರುವುದು ಸರಿಯಷ್ಟೆ. ವಿಶೇಷ ಮೀಸಲಾತಿ ಕಲ್ಪಿಸಿರುವುದಕ್ಕೆ ಸಂಬಂಧಿಸಿದಂತೆ ನಮ್ಮ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ನಿರ್ಣಯ ಹಾಗೂ ಸುತ್ತೋಲೆಯ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಕಳುಹಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ,

Srivana 4/7/15

ಕುಲಸಚಿವರು (ಪ್ರ)

# ಮಹಾರಾಜ ಸಂಸ್ಕೃತ ಕಾಲೇಜು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಘಟಕ ಕಾಲೇಜು

ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-24.


ಎಂ.ಎಸ್.ಸಿ/ಸಿ01/ಮೀಸಲಾತಿ/15-16 ದಿನಾಂಕ: 11/08/2015

ಗೆ,

ಮಾನ್ಯ ಕುಲಸಚಿವರು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ,
ಬೆಂಗಳೂರು-18.

ಮಾನ್ಯರೇ,

ವಿಷಯ: ಸೇವಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿ ಪತ್ರ ಸಂಖ್ಯೆ: ಕಸಂವಿ/01/2014-15/ಶೈ.ಅ.ವಿ.ವಿ.ಕೋ.ಮೀ/822-10, ದಿನಾಂಕ: 04/07/2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ; ಉಲ್ಲೇಖದ ಪತ್ರದಲ್ಲಿ ಒಡನಾಡಿ ಸಂಸ್ಥೆಯಂತಹ ಸೇವಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಈ ಕಾಲೇಜಿನಲ್ಲಿ ಮೀಸಲಾತಿ ನೀಡುವುದನ್ನು ಜಾರಿಗೊಳಿಸಲು ಸೂಚಿಸಿದ್ದು, ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಕಳುಹಿಸಲು ತಿಳಿಸಿರುವುದು ಸರಿಯಷ್ಟೆ. 2015-16ನೇ ಸಾಲಿನಲ್ಲಿ ಅಂತಹ ಯಾವುದೇ ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಪ್ರವೇಶ ನೋಂದಣಿ ಪಡೆದಿರುವುದಿಲ್ಲವೆಂಬ ವಿಷಯವನ್ನು ಈ ಮೂಲಕ ತಮ್ಮ ಅವಗಾಹನೆಗೆ ತರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಂಶುಪಾಲರು

ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು,
ಮೈಸೂರು - 570 024

ಗೆ,
ವಿಭಾಗದ ನೌಕರರು
21/9/15

ದಿನಾಂಕ 1/9/15
ಸಂಖ್ಯೆ 2639

...ರು ಸಂಪೂರ್ಣ ಟೆನ್ನಿಸ್‌ನತ್ತ ಹೊರಳಿದರು.

# ಒಡನಾಡಿ ಮಕ್ಕಳಿಗೆ ಸಂಸ್ಕೃತ ವಿವಿಯಲ್ಲೂ ಶೈಕ್ಷಣಿಕ ಮೀಸಲಾತಿ

ಮೈಸೂರು,ಜೂ.೨೪-ಲೈಂಗಿಕ ಶೋಷಣೆ ಹಾಗೂ ಮಾನವ ಸಾಗಾಣಿಕೆಗೆ ಒಳಪಟ್ಟ ಮಹಿಳೆಯರು ಮತ್ತು ಮಕ್ಕಳ ಸಬಲತೆಗಾಗಿ ಶ್ರಮಿಸುತ್ತಿರುವ ನಗರದ ಒಡನಾಡಿ ಸೇವಾ ಸಂಸ್ಥೆಯ ಮಕ್ಕಳ ಪ್ರವೇಶಾತಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ನೀಡಿರುವ ಮಾದರಿಯಲ್ಲಿಯೇ ಬೆಂಗಳೂರಿನಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವೂ ಪ್ರತ್ಯೇಕ ಶೈಕ್ಷಣಿಕ ಮೀಸಲಾತಿ ಕಲ್ಪಿಸಿದೆ.

ಯಾವುದೇ ಪ್ರಾಥಮಿಕ ಶಿಕ್ಷಣವಿಲ್ಲದೆ 'ಸೇತು ಬಂಧ'ದ ಮೂಲಕ ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಗೆ ಕಾಲಿಡುತ್ತಿರುವ ಈ ಮಕ್ಕಳು ಎಲ್ಲಾ ಸೌಲಭ್ಯಗಳೊಡನೆ ಬೆಳೆದು ಬರುವ ವಿದ್ಯಾರ್ಥಿ ಸಮುದಾಯದೊಂದಿಗೆ ಸ್ಪರ್ಧಿಸಲಾಗದೆ ಹೆಣಗಾಡುತ್ತಾರೆ. ಇಂತಹ ಮಕ್ಕಳಿಗೆ ಮಾನವೀಯ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯ ಈಗಾಗಲೇ ಶೈಕ್ಷಣಿಕ ಮೀಸಲಾತಿ ನೀಡಿ, ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಇದೇ ಮಾದರಿಯಲ್ಲಿ ರಾಜ್ಯದಲ್ಲಿರುವ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಶೈಕ್ಷಣಿಕ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸುವ ನಿಟ್ಟಿನಲ್ಲಿ ಕಳೆದ ವರ್ಷ ಮೇ ೩೧ರಂದು ಒಡನಾಡಿ ಸೇವಾ ಸಂಸ್ಥೆ, ಮಾನವ ಸಾಗಾಣಿಕೆ ವಿರೋಧಿ ಆಂದೋಲನ-ಕರ್ನಾಟಕ ಹಾಗೂ ಮೈಸೂರು ವಿವಿ ಸಹಭಾಗಿತ್ವದಲ್ಲಿ ಮಾನವ ಸಾಗಾಣಿಕೆಗೆ ಒಳಪಟ್ಟವರು, ದೇವದಾಸಿಯರು ಹಾಗೂ ಅವರ ಮಕ್ಕಳು, ಅತ್ಯಾಚಾರಕ್ಕೆ ಒಳಪಟ್ಟವರು, ವರದಕ್ಷಿಣೆ ಹಾಗೂ ಕೌಟುಂಬಿಕ ಪೀಡಣೆಗಳಿಂದ ನೊಂದವರು, ಆ್ಯಸಿಡ್ ದಾಳಿ ಹಾಗೂ ಭಾಗಶಃ ದಹಿಸಲ್ಪಟ್ಟವರು, ಲೈಂಗಿಕ ಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಗಾಗಿ ಕುಲಪತಿಗಳು, ಕುಲಸಚಿವರು ಹಾಗೂ ಸಮಾಜ ಚಿಂತಕರ ರಾಜ್ಯಮಟ್ಟದ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು ಭಾಗವಹಿಸಿ, ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಈ ಸಭೆಯ ಪರಿಣಾಮವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಒಡನಾಡಿ ಆಶ್ರಿತ ಮಕ್ಕಳ ಪ್ರವೇಶಾತಿಗಾಗಿ ಪ್ರತ್ಯೇಕ ಶೈಕ್ಷಣಿಕ ಮೀಸಲಾತಿ ಕಲ್ಪಿಸಿರುವುದು ಮಾನವೀಯ ಕಾಳಜಿಯ ದಿಟ್ಟ ಹೆಜ್ಜೆಯಾಗಿದೆ ಎಂದು ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ-ಪರಶು ತಿಳಿಸಿದ್ದಾರೆ.

ಧಾರಾವಾಡ ವಿಶ್ವವಿದ್ಯಾನಿಲಯ ಕೂಡ ಈ ವಿಚಾರವಾಗಿ ಧನಾತ್ಮಕವಾಗಿ ಪ್ರತಿಕ್ರಿಯಿಸಿದೆ. ಇದೇ ರೀತಿ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳೂ ಒಡನಾಡಿಯ ನ್ಯಾಯಯುತ ಬೇಡಿಕೆಗಳಿಗೆ ಧ್ವನಿಯಾದರೆ, ಅದೆಷ್ಟೋ ಶೋಷಣೆಗೆ ಒಳಗಾದ ಮಹಿಳೆಯರು ಮತ್ತು ಮಕ್ಕಳು ಸಾಮಾಜಿಕ ಬದಲಾವಣೆಯ ಹಾದಿಗೆ ಸೇರ್ಪಡೆಯಾಗಬಲ್ಲರು ಎಂದು ಅವರು ಹೇಳಿದ್ದಾರೆ.